**<u>ಸಾಕ್ಷಿಗೆ ದಿನಾಂಕ 06-03-2026 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆ: ಅರ್ಜಿದಾರರ ಪರ ಶ್ರೀ ಎಸ್ ಕೆ ವಕೀಲರಿಂದಃ</u>**

**1.** ನಾನು ಈ ಪ್ರಕರಣದಲ್ಲಿ ವೈದ್ಯ ಸಾಕ್ಷಿದಾರನಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಸಂಬಂಧಿಸಿದಂತೆ, ನಾನು ಈ ದಿನ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಅದರಲ್ಲಿರುವ ಅಂಶಗಳು ಸತ್ಯವಾಗಿರುತ್ತವೆ. ಅದನ್ನು ನಾನು ಓದಿ ತಿಳಿದುಕೊಂಡು ಸಹಿಮಾಡಿರುತ್ತೇನೆ.

**2.** ನಾನು ಈ ಪ್ರಕರಣದಲ್ಲಿ ಗಾಯಾಳುವಿಗೆ ಸಂಬಂಧಿಸಿದಂತೆ ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡುತ್ತಿದ್ದೇನೆ. ಸಾಕ್ಷಿದಾರರು ಮಾಡಿದ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನಿಕರಿಸಲಾಗಿರುತ್ತದೆ.:

| | |
|---|---|
| ನಿ.ಪಿ **20** | ಕ್ಲಿನಿಕಲ್ ನೋಟ್ |
| ನಿ.ಪಿ **21** | ಅಂಗನ್ಯೂನತೆ ಮೌಲ್ಯಮಾಪನ ಪಟ್ಟಿ |
| ನಿ.ಪಿ **22** | **2** ಎಕ್ಸ್ ರೇಗಳು |

**<u>ಪಾಟೀ ಸವಾಲುಃ *2* ನೇ ಎದುರುದಾರರ ಪರ ಶ್ರೀ ಶಿವುಕುಮಾರ್ ವಕೀಲರು ಶ್ರೀ ವೈ ಪಿ ಎನ್ ವಕೀಲರ ಪರವಾಗಿಃ</u>**

1. ಅರ್ಜಿದಾರರಿಗೆ ನಾನು ಮೂಲತಃ ಚಿಕಿತ್ಸೆ ನೀಡಿದ ವೈದ್ಯನಾಗಿರುವುದಿಲ್ಲ ಎಂದರೆ ಸರಿ. ನಾನು ಪ್ಲಾಸ್ಟಿಕ್ ಸರ್ಜನ್ ಆಗಿರುತ್ತೇನೆ. ಮೂಳೆಗಳಿಗೆ ಸಂಬಂಧಪಟ್ಟಂತೆ ನನಗೆಹೆಚ್ಚಿನ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಹೇಳಿರುವ ಗಾಯಗಳು ಮೂಳೆಗಳಿಗೆ ಸಂಬಂಧಿಸಿವೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಮೂಳೆಮುರಿತ ಉಂಟಾರುತ್ತದೆ ಆದರೆ ಒಳಜೋಡಣೆ ಇರುವುದಿಲ್ಲ. ಅರ್ಜಿದಾರರಿಗೆ ಮೂಳೆಮುರಿತಕ್ಕೆ ಶಸ್ತ್ರಚಿಕಿತ್ಸೆ ಆಗಿರುತ್ತದೆ. ನಾನು ಅರ್ಜಿದಾರರ ಹಳೆಯ ಎಕ್ಸ್ ರೇಗಳನ್ನು ನೋಡಿರುವುದಿಲ್ಲ.

2. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಹೇಳಿರುವ 4ನೇ ಗಾಯಕ್ಕೆ ಸಂಬಂಧಿಸಿದಂತೆ ಒಳಜೋಡಣೆ ಇರುವುದಿಲ್ಲ ಎಂದರೆ ಸರಿ. ಅರ್ಜಿದಾರರಿಗೆ ಯಾವ ಆಧಾರದ ಮೇಲೆ ಅಂಗನ್ಯೂನತೆಯನ್ನು ನಿರ್ಧರಿಸಿರುತ್ತೀರಾ ಎಂದರೆ ಲಿವ್ಕೋ ನಿಯಾಮಾವಳಿಗಳ ಪ್ರಕಾರ ಮತ್ತು ಕ್ಲಿನಿಕಲ್ ಪರೀಕ್ಷೆಯ ಆಧಾರದ ಮೇಲೆ ನಿರ್ಧರಿಸಿರುತ್ತೇವೆ. ಅರ್ಜಿದಾರರಿಗೆ ಈಗ ಯಾವುದೇ ಗಾಯಗಳು ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಕಲೆಗಳು ಮಾತ್ರ ಉಳಿದಿರುತ್ತವೆ ಎಂದು ನುಡಿಯುತ್ತಾರೆ. ಅದಕ್ಕೆ ಸಂಬಂಧಿಸಿದಂತೆ ನಿಪಿ.20ನ್ನು ಹಾಜರುಪಡಿಸಿರುತ್ತೇನೆ. ನಿಪಿ.20ರಲ್ಲಿ ನಮೂದಿಸಿರುವ ತೊಂದರೆಗಳ ಬಗ್ಗೆ ಇತರಾ ವೈದ್ಯಕೀಯ ದಾಖಲೆಗಳಲ್ಲಿ ನಮೂದಾಗಿರುವುದಿಲ್ಲ ಎಂದರೆ ಸರಿಯಲ್ಲ.

3. ಅರ್ಜಿದಾರರ ಎಡಗಾಲಿನ ಕೆಳಭಾಗದಲ್ಲಿ ಶೇ.26.82 ರಷ್ಟು ಅಂಗನ್ಯೂನತೆ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೊಣಕಾಲಿನಲ್ಲಿ ಯಾವುದೇ ಮೂಳೆಮುರಿತವಾಗಿಲ್ಲ ಎಂದರೆ ಸರಿ. ಅರ್ಜಿದಾರರ ಮಾಂಸಖಂಡ ಅಪಘಾತದ ಸಮಯಕ್ಕೂಮತ್ತು ಇವತ್ತಿಗೂ ಸುಧಾರಣೆಯಾಗಿರುತ್ತದೆ ಎಂದರೆ ಸರಿ. ಅರ್ಜಿದಾರರ ಮಾಂಸಖಂಡ ಶಕ್ತಿ ಶೇ.10 ರಷ್ಟು ಕುಂಠಿತಗೊಂಡಿದೆ ಎಂದು ತೋರಿಸಲು ವಿವರವಾಗಿ ನಮೂದಿಸಿರುವುದಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ರೂ.1,00,000/- ದಿಂದ ರೂ,1,50,000/- ಮುಂದುವರೆದ ಚಿಕಿತ್ಸೆ ಅವಶ್ಯಕತೆ ಇದೆ ಎಂದು ಹೇಳಿದ್ದು ಅದಕ್ಕೆ ವೆಚ್ಚಪಟ್ಟಿ ನೀಡಿರುವುದಿಲ್ಲ ಎಂದರೆ ಸರಿ.

4. ಅರ್ಜಿದಾರರು ದೈನಂದಿನ, ನಿಂತು ಮತ್ತು ಕುಳಿತು ಕೆಲಸ ಮಾಡಲು ತೊಂದರೆ ಇಲ್ಲ ಎಂದರೆ ಸರಿ. ಅರ್ಜಿದಾರರ ಚಿಕಿತ್ಸೆ ಪೂರ್ಣಗೊಂಡಿದೆ ಎಂದರೆ ಸರಿಯಲ್ಲ. ಅರ್ಜಿದಾರರ ಮುಂದುವರೆದ ಚಿಕಿತ್ಸಾ ದಾಖಲೆಗಳನ್ನು ನೋಡಿರುವುದಿಲ್ಲ ಎಂದರೆ ಸರಿ. ಅರ್ಜಿದಾರರಿಗೆ ನಾನು ಚಿಕಿತ್ಸೆ ನೀಡದೇ ಇರುವುದರಿಂದ ಅಂಗನ್ಯೂನತೆಯನ್ನು ನಿರ್ಧರಿಸಲು ಮತ್ತು ಸಾಕ್ಷ್ಯ ನೀಡಲು ಸೂಕ್ತ ವ್ಯಕ್ತಿಯಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಯಾವುದೇ ತೊಂದರೆ ಇಲ್ಲದೇ ಇದ್ದರೂ ಸಹ ಅರ್ಜಿದಾರರಿಗೆ

ಸಹಾಯ ಮಾಡುವ ಉದ್ದೇಶದಿಂದ ಅಂಗನ್ಯೂನತೆಯನ್ನು ನಿರ್ಧರಿಸಿ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು

ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 1 ನೇ ಎದುರುದಾರರು ಏಕ-ಪಕ್ಷೀಯ. ಆದ್ದರಿಂದ ಪಾಟೀ ಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ.

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**